ಹ್ವಾತವಾಗಿದ್ದರೂ ಹೊಳೆಯುವ ಕಣ್ಣುಗಳು–ಆತ ಆಸೆಯಿಂದಲೆ ಒಪ್ಪಿಕೊಂಡ. ಬೇಕು ಬೇಕೆನ್ನುವ, ನಿಟ್ಟುಸಿರನ್ನೆ ಬಿಡದ ಸಂಗಾತಿಯಾದಳು. ಅವಳನ್ನ ಗಾಢವಾಗಿ ಪ್ರೀತಿಸುತ್ತ ಜೀವಕ್ಕೆ ಜೀವವಾಗಿ, ಮಗುವ ತಾಯಾಗಿ ನೋಡಿಕೊಂಡ. ತನ್ನ ಮನಸ್ಸಿನ ಮಜ್ಜಿಗೆಯೊಳಗೆ ಬೆಣ್ಣೆಯಾಗಿ ತೇಲಿಬಿಟ್ಟ.

ಮಗನ ಮದುವೆ ಬಿಟ್ಟರೆ ಒಂದಿಷ್ಟು ಶಿಷ್ಯವರ್ಗ ಮಾಡಿಕೊಟ್ಟದ್ದಷ್ಟೆ ಅಪ್ಪನ ಕೊಡುಗೆ. ಆದರೆ, ಇದ್ದ ಬೆರಳೆಣಿಕೆಯ ಶಿಷ್ಯರಿಂದ ಜೀವನಕ್ಕಾಗುವಷ್ಟು ಬರುತ್ತಿರಲಿಲ್ಲ. ಅದಕ್ಕೆ ಗಣೇಶ ಚೌತಿ, ದೀಪಾವಳಿ, ನವರಾತ್ರಿ ಮುಂತಾದ ಹಬ್ಬ ಹರಿದಿನಗಳಲ್ಲಿ ಗೋವಾ ಮಹಾರಾಷ್ಟ್ರ ಮುಂತಾದ ಕಡೆಗೆ ಅನುಭವಸ್ಥ ವೈದಿಕರೊಟ್ಟಿಗೆ ಹೋಗಿ ಒಂದಿಷ್ಟು ದುಡಿಯುವುದೂ ಅಭ್ಯಾಸವಾಗಿ ಹೇಗೋ ಜೀವನ ನಡೆಯುತ್ತಿತ್ತು. ಈ ಹಂತದಲ್ಲಿಯೆ ಒಂದು ವಂಶರತ್ನವು ಹುಟ್ಟಿತು. ಬಡತನದ ರೇಜಿಗೆಯಿಂದ ಹೆಂಡತಿಯ ಗೊಣಗಾಟವು ಹೆಚ್ಚಾಗುತ್ತ ಥಟ್ಟನೆ ತಣ್ಣಗಾಯಿತು. ಇವನಿಗೆ ತಿರುಗಾಟ, ತಿರುಗಾಟ, ತಿರುಗಾಟ. ಹೊತ್ತು ಗೊತ್ತಿಲ್ಲದ ಊಟ, ನಿದ್ದೆ. ಅವನ ಅನುಪಸ್ಥಿತಿಯ ವಸಂತದಲ್ಲಿ ಮತ್ತೊಂದು ಕುಡಿ ಮೊಳೆಯಿತು.

ಅದೊಂದು ದುರ್ದಿನ. ರಾಗರಂಜಿತ ಮುಗಿಲ ಮೇಲುದುವ ಹೊದ್ದ ಮುಸ್ಸಂಜೆ. ಮೊದಲ ಮಳೆಯ ಅನಂತರ ಗದ್ದೆ ಹೂಟೆ ಮುಗಿಸಿದ ಎತ್ತುಗಳು ಹಟ್ಟಿಯೊಳಗೆ ನುಗ್ಗುವ ಹೊತ್ತು. ಗೋವಾದಲ್ಲಿ ನಾಗಪ್ರತಿಷ್ಠೆ ಕಾರ್ಯಕ್ರಮ ಮುಗಿಸಿ ಹೇಳಿದ್ದಕ್ಕಿಂತ ಒಂದು ದಿನ ಮುಂಚೆಯೆ ಮರಳಿ ಬಂದು ಮನೆಬಾಗಿಲು ದೂಡಿದರೆ ತೆಗೆಯಲಿಲ್ಲ. ಕಿಟಕಿಯಲ್ಲಿ ಕಣ್ಣು ತೂರಿ ಕರೆಯಬೇಕೆಂದು ನೋಡಿದಾಗ ಕಂಡದ್ದು ಅರೆಬೆತ್ತಲಾಗಿ ಹೊರಳಾಡುತ್ತಿದ್ದ ಅವರಿಬ್ಬರು. ಆಹ್ನಿಕದ ಅಗ್ನಿ ಉರಿಯುವ ಮನೆಯಲ್ಲಿ ಕಾಮದ ಅಗ್ನಿ ಹೊತ್ತಿಕೊಂಡಿತ್ತು. ದಟ್ಟಿಸಿ ಕೇಳಿದರೆ, 'ಹಸಿವಾದಾಗ ಮನೆಯಲ್ಲಿ ಏನೂ ಇಲ್ಲವಾದರೆ ನಾವು ಹೊರಗಿನಿಂದ ತಂದು ತಿನ್ನುವುದಿಲ್ಲವೆ?' ಎನ್ನುವ ಧಾಡಸಿ ಉತ್ತರ ಬಂದದ್ದೆ ಕಾಮಾರಿ ಅವನ ಕೈಮೇಲೇರಿ ಬೀಸಿದ. ಆಯಕ್ಕೆ ತಾಗಿದ ಹೊಡೆತಕ್ಕೆ ಅವಳಲ್ಲೆ ರಕ್ತ ಕಾರಿಕೊಂಡು ಬಿದ್ದಳು. ಕಂಗಾಲಾದ ಜೊತೆಗಿದ್ದವನು ಹೊಸಿಲೆಡವುತ್ತ ಮನೆಯ ಚಿಲಕ ತೆಗೆದು ಓಡತೊಡಗಿದಾಗ ಆತ ಕಿಟಕಿಯ ಬಳಿಯಿದ್ದ ಕುಡುಗೋಲು ತೆಗೆದು ಬೀಸಿದ. ಗುರಿ ತಪ್ಪಿ ಮೆಟ್ಟಿಲ ಕಲ್ಲ ಮೇಲೆ ಠಣ್ ಎಂದು ಬಿದ್ದ ಕತ್ತಿ ಜಿಗಿದು ಮಣ್ಣಿನಂಗಳದಲ್ಲಿ ಕೂತಿತು.

ಆತ ಪೊಲೀಸರಿಗೆ ಶರಣಾಗಿ ಹೇಳಿದ – ನನ್ನ ಹೆಂಡತಿ ನಡತೆಗೆಟ್ಟಿದ್ದಳು. ಶಿಕ್ಷಿಸಲು ಹೊಡೆದೆ. ಹಾಳಾಗಿದ್ದ ಹಾಲು ಚೆಲ್ಲಿಹೋಯಿತು.

★★★

ಚಾಪೆಯ ಮೇಲೆ ಹೊರಳುತ್ತಿದ್ದವನಿಗೆ ಮಕ್ಕಳ ನೆನಪು ಬಂತು. ಯಾಕೋ ಮಕ್ಕಳನ್ನ ನೋಡಬೇಕು ಅನ್ನಿಸಲಿಲ್ಲ. ಮಕ್ಕಳನ್ನ ಅವರ ಅಜ್ಜ ಬಂದು ಕರೆದೊಯ್ದಿದ್ದಾನೆ ಎನ್ನುವ ಸುದ್ದಿಯೇನೊ ಸಿಕ್ಕಿತ್ತು. ಅಷ್ಟಕ್ಕು ಈಗವರು ದೊಡ್ಡವರಾಗಿರಬಹುದು. ಹಾಗೂ ತನ್ನದಲ್ಲ ಎಂದು ತಿಳಿದೂ ಆ ಮಕ್ಕಳನ್ನ ನೋಡುವಂಥಾದ್ದೇನಿದೆ? ಒಂದರ್ಥದಲ್ಲಿ ಸೂಳೇಮಕ್ಕಳೆ ಅಲ್ಲವೆ? ಅವರದೇನೂ ತಪ್ಪಿಲ್ಲದಿರಬಹುದು. ಆದರೆ, ಇಂಥ ತಂದೆಯ ಮಕ್ಕಳು ಅಥವಾ ಅಂಥಾ ತಾಯಿಯ ಮಕ್ಕಳು ತಾವು ಎನ್ನುವುದು ಅವರ ಅರಿವಿಗೇ ಬರದೆ ಬೆಳೆಯುವುದೇ ಸೂಕ್ತ ಎನ್ನಿಸಿ ಅವರನ್ನ ನೋಡುವ ತೀರ್ಮಾನ ಕೈ ಬಿಟ್ಟ. ಆದರೆ, ತನ್ನ ಊರಿಗಂತು ಹೋಗಲೇಬೇಕು. ಹಳೆಯದನ್ನೆಲ್ಲ ಮರೆತು ಹೊಸ ಜೀವನ ಪ್ರಾರಂಭಿಸಬೇಕು. ವನವಾಸಕ್ಕೊಂದು ಅಂತ್ಯ, ಮರಕ್ಕೊಂದು ಮರುವಸಂತ. ದೇವರ ಧ್ಯಾನ ಮಾಡುತ್ತ, ಆಸಕ್ತಿಯುಳ್ಳ ಮಕ್ಕಳಿಗೆ ಸಂಗೀತ ಹೇಳಿಕೊಡುತ್ತ, ಹೇಗೂ ಈಗ ಈ ಗೆಲುವಿನಿಂದಾಗಿ ಒಳ್ಳೇ ಹೆಸರಂತು ಬಂದಿದೆಯಲ್ಲ... ಜೊತೆಗೆ ಒಂದಿಷ್ಟು ದುಡ್ಡು... ನಿರ್ಣಯ ಗಟ್ಟಿಯಾಗುತ್ತಿದ್ದಂತೆ ಗಾಢ ನಿದ್ದೆ ಹೊದ್ದುಕೊಂಡಿತ್ತು.